ಆ. ಆ ಪೈಕಿ ಪರಿಶಿಷ್ಟ ಜಾತಿ ; ಪರಿಶಿಷ್ಟ ಪಂಗಡದವರಿಗೆ ಗಣಿಗಾರಿಕೆಗಾಗಿ ಸರ್ಕಾರಿ ಜಮೀನನ್ನು ನೀಡಲಾಗಿದೆ (ವಿವರಗಳನ್ನು ನೀಡುವುದು)?

ಶ್ರೀ ಧರಂಸಿಂಗ್ (ಮುಖ್ಯ ಮಂತ್ರಿಗಳು) ;

ಅ. ಚಾಮರಾಜನಗರ ತಾಲ್ಲೂಕಿನಲ್ಲಿ 2003 ರಿಂದ 2004ರ ಅವಧಿವರೆಗೆ ಒಟ್ಟು 9 ಗ್ರಾನೈಟ್ ಮತ್ತು 16 ಕಟ್ಟಡದ ಕಲ್ಲು ಗಣಿಗಾರಿಕೆಗೆ ಮಂಜೂರಾತಿ ನೀಡಿದೆ.

ಆ. ಹೌದು. ಮೇಲ್ಮಾಲ ಗ್ರಾಮದ ಸರ್ವೆ ನಂ.248ರ 5–20 ಎಕರೆ ಪ್ರದೇಶವನ್ನು ಶ್ರೀ ತಾರಕ, (ಎಸ್.ಸಿ : ಎಸ್.ಟಿ) ಕಲ್ಲುಕುಟಿಗರ ಸಹಕಾರ ಸಂಘ ನಿಯಮಿತ, ಇವರಿಗೆ ಗ್ರಾನೈಟ್ ಗಣಿಗಾರಿಕೆಗೆ ಗುತ್ತಿಗೆ ಜಾರಿ ಮಾಡಲಾಗಿದೆ.

1561 (2149) ಶ್ರೀ ಧ್ರುವನಾರಾಯಣ ಆರ್. (ಸಂತೇಮರಹಳ್ಳಿ) ಮಾನ್ಯ ಮುಖ್ಯ ಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ವೀರಪ್ಪನ್ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದ ಎಸ್.ಟಿ.ಎಫ್ ಪೋಲೀಸರಿಗೆ ತಮಿಳುನಾಡು ಸರ್ಕಾರ ಕೊಟ್ಟಂತಹ ಪರಿಹಾರದ ವಿವರ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ. ಬಂದಿದ್ದಲ್ಲಿ, ಸರ್ಕಾರ ಕರ್ನಾಟಕ ರಾಜ್ಯದ ಎಸ್.ಟಿ.ಎಫ್ ಪೊಲೀಸರಿಗೆ ಪರಿಹಾರ ನೀಡಿದೆಯೇ?

ಇ. ನೀಡಿದ್ದಲ್ಲಿ, ಪರಿಹಾರದ ವಿವರಗಳೇನು?

ಶ್ರೀ ಧರಂಸಿಂಗ್ (ಮುಖ್ಯ ಮಂತ್ರಿಗಳು)

ಅ. ಬಂದಿದೆ.

ಆ. ಈ ಬಗ್ಗೆ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು ಬೆಂಗಳೂರು ಇವರಿಂದ ಪ್ರಸ್ತಾವನೆ ಬಂದಿದ್ದು, ಎಸ್.ಟಿ.ಎಫ್. ಪಡೆಯ ಸಿಬ್ಬಂದಿಗೆ ಸೂಕ್ತ ಬಹುಮಾನಗಳನ್ನು ಘೋಷಿಸಲು ಸರ್ಕಾರ ಪರಿಶೀಲಿಸುತ್ತಿದೆ.

ಇ. ಇದು ಪರಿಶೀಲನೆ ಹಂತದಲ್ಲಿದ್ದು, ಸದ್ಯದಲ್ಲಿ ಸೂಕ್ತ ನಿರ್ಧಾರ ತೆಗೆದುಕೊಳ್ಳಲಾಗುವುದು.

1562(2150) ಶ್ರೀ ಧ್ರುವನಾರಾಯಣ ಆರ್. (ಸಂತೇಮರಳ್ಳಿ) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಸಂತೇಮಾರಳ್ಳಿ ಕ್ಷೇತ್ರದ ಗ್ರಾಮಗಳಿಗೆ ಗ್ರಾಮೀಣ ಸಾರಿಗೆ ಬಸ್ ಸೌಕರ್ಯದ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ. ಬಂದಿದ್ದಲ್ಲಿ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು ;

ಇ. ಚಾಮರಾಜನಗರ ಬಸ್ ಡಿಪೋ ಉದ್ಘಾಟನೆ ವಿಳಂಬವಾಗಲು ಕಾರಣವೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ. ಇಲ್ಲ.

ಆ. ಉದ್ಭವಿಸುವುದಿಲ್ಲ.

ಇ. ಅತಿ ಶೀಘ್ರದಲ್ಲಿಯೆ ಉದ್ಘಾಟಿಸಲಾಗುವುದು.

1563(2151) ಶ್ರೀ ಧ್ರುವನಾರಾಯಣ ಆರ್. (ಸಂತೇಮರಹಳ್ಳಿ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ಚಾಮರಾಜನಗರ ತಾಲ್ಲೂಕಿನಲ್ಲಿ ನಡೆಯುತ್ತಿರುವ ಗಣಿಕೈಗಾರಿಕೆಗಳಲ್ಲಿ ಅಧಿಕೃತ ಗಣಿಗಾರಿಕೆಗಳೆಷ್ಟು ;